KARNATAKA LEGISLATIVE ASSEMBLY RESEARCH AND REFERENCE BRANCH

PAPER CLIPPINGS

DEPARTMENT / SUBJECT:

NAME OF THE NEWS PAPER:

DATE: 25/07/2020

ಆಗಸ್ಟ್‌ನಲ್ಲಿ ಪುನಾರಚನೆಗೆ ಗಂಭೀರ ಚಿಂತನೆ । ಮೌಲ್ಯಮಾಪನ ವರದಿ ಹೈಕಮಾಂಡ್‌ಗೆ ರವಾನೆ

# ಸಚಿವ ಸಂಪುಟ ವಿಸ್ತರಣೆ ಸದ್ಯಕ್ಕೆ ಅನುಮಾನ

25-7-2020

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಕಾರ್ಮೋಡದ ಮಧ್ಯೆ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ 1 ವರ್ಷ ಪೂರ್ಣಗೊಳಿಸುವ ಹುರುಪಿನಲಿದ್ದು, ಈ ಕಾರ್ಯಕ್ರಮದ ಪೂರ್ವಸಿದ್ಧತೆಯಲ್ಲಿ ಮಗ್ನವಾಗಿದೆ. ನಂತರವೂ ಹಲವು ದಿನಗಳ ಕಾಲ ರಾಜ್ಯದ ಜನರನ್ನು ಒಳ್ಳೆಯ ಮೂಡ್‌ನಲ್ಲಿ ಇರಿಸಲು ಬಯಸಿದ್ದು, ಸಚಿವ ಸಂಪುಟ ವಿಸ್ತರಣೆ ಸದ್ಯಕ್ಕೆ ಅನುಮಾನ.

ವರ್ಷದ ಹರ್ಷ ಮುಗಿದ ಬೆನ್ನಲ್ಲೇ ವಿಸ್ತರಣೆಗೆ ಕೈಹಾಕಿದರೆ, ಎಲ್ಲರನ್ನೂ ತೃಪ್ತಿಪಡಿಸಲಾಗದು. ಅನಗತ್ಯ ಭಿನ್ನಮತ, ಅಸಮಾಧಾನಕ್ಕೆ ವೇದಿಕೆ ಕಲ್ಪಿಸಿದಂತಾಗುತ್ತದೆ. ಇದು ಒಂದು ಕಾರಣವಾದರೆ, ಕರೊನಾ ಅಸಮರ್ಪಕ ನಿರ್ವಹಣೆ, ಆರೋಪಗಳ ಕರಿಛಾಯೆ ಆವರಿಸಿದೆ. ಇವು ಮತ್ತೆರಡು ಪ್ರಬಲ ಕಾರಣಗಳಾಗಿವೆ. ಇದರಿಂದಾಗಿ ಒತ್ತಡಗಳಿದ್ದರೂ ಸಚಿವ ಸಂಪುಟ ವಿಸ್ತರಣೆ ನಡೆದಿಲ್ಲವೆಂದು ಉನ್ನತ ಮೂಲಗಳು ತಿಳಿಸಿವೆ.

**ತಕ್ಷಣದ ಆದ್ಯತೆ:** ಸೋಂಕಿನ ಹಾವಳಿ ಯಾವಾಗ ತಗ್ಗುತ್ತದೋ, ನಿಲ್ಲುತ್ತದೋ ತಜ್ಞರಿಗೆ ಗೊತ್ತಿಲ್ಲ, ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಸರ್ಕಾರಕ್ಕೆ ತಿಳಿದಿದೆ. ಸೋಂಕು ನಿಯಂತ್ರಣ ಮತ್ತು ಪರಿಣಾಮಕಾರಿ ನಿರ್ವಹಣೆ ತಕ್ಷಣದ ಆದ್ಯತೆ, ತುರ್ತು ಅಗತ್ಯವೂ ಆಗಿದೆ. ಪ್ರಾರಂಭಿಕ ಉತ್ಸಾಹ ಕ್ರಮೇಣ ಕರಗಿ ಸೋಂಕಿತರು ಹಾಗೂ ಸಂಪರ್ಕಿತರ ಪತ್ತೆ ಕಾರ್ಯ ಸೊರಗಿದ್ದೂ ಪರಿಸ್ಥಿತಿ ಹತೋಟಿ ತಪ್ಪಿಸಿದೆ. ಸೋಂಕು ಹಬ್ಬುವಿಕೆ ತಡೆ, ಸೋಂಕಿತರಿಗೆ ಚಿಕಿತ್ಸೆ ಸಮರ್ಪಕವಾಗಿಲ್ಲವೆಂಬ ಅಪಸ್ವರ ಕೊನೆಗಾಣಿಸಲು ದೃಢ ಸಂಕಲ್ಪ ಮಾಡಿದ್ದು, ಮುಖ್ಯಮಂತ್ರಿ ನಿರ್ಧಾರಕ್ಕೆ ಅನುಗುಣವಾಗಿ ಸಚಿವರೆಲ್ಲರೂ ತಂಡಸ್ಫೂರ್ತಿಯಿಂದ ಜವಾಬ್ದಾರಿ ನಿರ್ವಹಿಸಲು ಹೈಕಮಾಂಡ್ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.



ಪ್ರತಿಪಕ್ಷಗಳು ಆಪಾದನೆಯ ಸ್ವರ ಎತ್ತಿದಾಗಲೇ ತಕ್ಕ ಉತ್ತರ ನೀಡಬೇಕಾಗಿತ್ತು. ಕಾದು ನೋಡುವ ಧೋರಣೆ ಅನುಸರಿಸಿದ್ದು ಸರಿಯಲ್ಲ ಎನ್ನುವುದು ಮನವರಿಕೆಯಾಗಿದೆ. ಬಿಎಸ್‌ವೈ ನೆರವಿಗೆ ಎಲ್ಲ ಸಚಿವರು ತಕ್ಷಣವೇ ಬರಬೇಕಾಗಿತ್ತು. ತಡವಾಗಿಯಾದರೂ ಸಚಿವರ ತಂಡವು ಉತ್ತರ ನೀಡಿದ್ದು, ಅವ್ಯವಹಾರಗಳೆಲ್ಲ ಸುಳ್ಳು ಎಂಬುದು ಜನರಿಗೆ ಮನವರಿಕೆಯಾದಾಗಲಷ್ಟೇ ಸರ್ಕಾರ ಈ ಕಳಂಕದಿಂದ ಹೊರಬರಲು ಸಾಧ್ಯವಿದೆ. ಆಪಾದನೆಯನ್ನು ತೊಡೆದು ಹಾಕುವುದು ಎರಡನೇ ಆದ್ಯತೆಯಾಗಿದೆ. ಪಕ್ಷದ ರಾಷ್ಟ್ರೀಯ ನಾಯಕರ ಸೂಚನೆಯಂತೆ ಎರಡೂ ಪ್ರಮುಖ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಬೇಕು. ಇದರಿಂದ ಸರ್ಕಾರದ ಕೆಲಸ-ಕಾರ್ಯಗಳು ಚರ್ಚೆಯ ಮುನ್ನೆಲೆಗೆ ಬಂದು ಸಕಾರಾತ್ಮಕ ಭಾವನೆ ಬೆಳೆಯಲಿದೆ ಎನ್ನುವುದು ವರಿಷ್ಠರ ಲೆಕ್ಕಾಚಾರವೆಂದು ಮೂಲಗಳು ಹೇಳಿವೆ.

## 6 ಸ್ಥಾನಗಳಿಗೆ ಹತ್ತಾರು ಆಕಾಂಕ್ಷಿಗಳು

ಸಚಿವ ಸಂಪುಟ ವಿಸ್ತರಣೆ ಬದಲು ಪುನಾರಚನೆಗೆ ಸಿಎಂ ಒಲವು ತೋರಿದ್ದು, ಹೈಕಮಾಂಡ್ ಕೂಡ ಒತ್ತಾಸೆ ನೀಡಿದೆ. ಇದಕ್ಕೆ ಪೂರಕವಾಗಿ ಹಾಲಿ ಸಚಿವರ ಕಾರ್ಯವೈಖರಿಯ ಮೌಲ್ಯಮಾಪನದ ವರದಿ ತರಿಸಿಕೊಂಡಿದ್ದು, ಯಾರು? ಹೇಗೆ? ಕೆಲಸ ಮಾಡಿದ್ದಾರೆ ಎಂದು ವಿಶ್ಲೇಷಿಸಲಿದೆ. ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿದೆ, 6 ಸ್ಥಾನಗಳು ಖಾಲಿ ಇವೆ. ಅರ್ಹರ ಜತೆಗೆ ಪಕ್ಷ ಮೂಲದವರಿಗೆ ಅವಕಾಶ ಕಲ್ಪಿಸುವುದಕ್ಕಾಗಿಯೇ ಪುನಾರಚನೆ ಚಿಂತನೆ ನಡೆದಿದ್ದು, ಆಗಸ್ಟ್‌ನಲ್ಲಿ ಈ ಪ್ರಕ್ರಿಯೆಗೆ ಚಾಲನೆ ನೀಡುವ ಸಾಧ್ಯತೆಗಳಿವೆ. ಕೆಲವು ಸಚಿವರನ್ನು ಕೈಬಿಟ್ಟು ಪಕ್ಷದ ಸಂಘಟನೆ ಕಾರ್ಯದಲ್ಲಿ ತೊಡಗಿಸುವುದು. ಮಾತು ಕೊಟ್ಟಂತೆ ಸರ್ಕಾರ ಅಧಿಕಾರಕ್ಕೆ ಬರಲು ನೆರವಾದವರಿಗೆ ಸ್ಥಾನ ಹಾಗೂ ಪಕ್ಷದ ಮೂಲದವರಿಗೂ ಆದ್ಯತೆಯ ಲೆಕ್ಕಾಚಾರಗಳಿದ್ದು, ಮುಂದಿನ ರಾಜಕೀಯ ಬೆಳವಣಿಗೆಯನ್ನು ಅವಲಂಬಿಸಿದೆ. ಸರ್ಕಾರ ನಿರೀಕ್ಷೆಯಂತೆ ಸ್ಥಿರತೆ ಸಾಧಿಸಿದ್ದು, ವರ್ಚಸ್ಸು ವೃದ್ಧಿ ಮತ್ತು ಪಕ್ಷದ ಸಂಘಟನೆ ಬಲಪಡಿಸುವ ಕೆಲಸ ಚುರುಕುಗೊಳ್ಳಬೇಕಾಗಿದೆ. ವಿಸ್ತರಣೆಗಿಂತ ಪುನಾರಚನೆಯೇ ಲೇಸು ಎಂಬ ಚಿಂತನೆಯೇ ಅಂತಿಮ ನಿರ್ಧಾರವಾದರೆ, ಮಂತ್ರಿ ಪದವಿ ಅಲಂಕರಿಸುವುದಕ್ಕಾಗಿ ಉಮೇಶ ಕತ್ತಿ, ಅರವಿಂದ ಲಿಂಬಾವಳಿ, ಎಂಟಿಬಿ ನಾಗರಾಜ್, ಆರ್.ಶಂಕರ್ ಮುಂತಾದ ಕೆಲವು ಪ್ರಬಲ ಆಕಾಂಕ್ಷಿಗಳು ಮತ್ತಷ್ಟು ದಿನ ಕಾಯಬೇಕಾಗುತ್ತದೆ.



ಸಂಪುಟ ಪುನಾರಚನೆ ವೇಳೆ ಹಿರಿಯ ಸಚಿವರನ್ನ ಕೈಬಿಡೋ ವಿಚಾರದ ಬಗ್ಗೆ ಪಕ್ಷದಲ್ಲಿ ಚರ್ಚೆ ಆಗಿಲ್ಲ. ಆ ಬಗ್ಗೆ ಮಾಹಿತಿಯೂ ಇಲ್ಲ. ಅದೆಲ್ಲ ಊಹಾಪೋಹ.

। ಗೋವಿಂದ ಕಾರಜೋಳ ಡಿಸಿಎಂ